## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1371 (1113) |
| ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ |
| ಉತ್ತರಿಸಬೇಕಾದ ದಿನಾಂಕ | 16.03.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನವೆಷ್ಟು; ದಂಡನೆಯ ಮೂಲಕ ಸಂಗ್ರಹವಾದ ಮೊತ್ತವೆಷ್ಟು; (ವರ್ಷವಾರು, ಜಿಲ್ಲಾವಾರು, ತಾಲ್ಲೂಕುವಾರು, ಗಣಿಪ್ರಕಾರವಾರು ಮಾಹಿತಿಯನ್ನು ಒದಗಿಸುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ರಾಜಧನ ಹಾಗೂ ಕಲ್ಲುಗಣಿ ಗುತ್ತಿಗೆದಾರರಿಂದ ದಂಡ ಮೂಲಕ ಸಂಗ್ರಹವಾದ ಮೊತ್ತದ **ವಿವರಗಳನ್ನು ಅನುಬಂಧ – 1 ಮತ್ತು 2 ರಲ್ಲಿ** ನೀಡಲಾಗಿದೆ. |
| ಆ) | ಉಡುಪಿ ಜಿಲ್ಲೆಯಲ್ಲಿ ಡ್ರೋಣ್ ಸರ್ವೆಯ (DRONE SURVE) ಮೂಲಕ ಗುರುತಿಸಲಾದ ಗಣಿ ಪ್ರದೇಶಗಳು ಯಾವುವು; (ಗಣಿ ಪ್ರದೇಶವಾರು ಮಾಹಿತಿಯನ್ನು ನೀಡುವುದು) Ground Survey ಯ ಮೂಲಕ ಗುರುತಿಸಲಾದ ಗಣಿ ಪ್ರದೇಶಕ್ಕೂ ಡ್ರೋಣ್ ಸರ್ವೆಯ (DRONE SURVE) ನಲ್ಲಿ ಗುರುತಿಸಲಾದ ಗಣಿ ಪ್ರದೇಶಕ್ಕೂ ವ್ಯತ್ಯಾಸವಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಪ್ರಕರಣವಾರು ವಿವರ ನೀಡುವುದು) | 2018–19ನೇ ಸಾಲಿನಲ್ಲಿ Drone / DGPS ಸಮೀಕ್ಷೆ ಮೂಲಕ ರಾಜ್ಯದಲ್ಲಿ ಮಂಜೂರು ಮಾಡಿರುವ ಕಟ್ಟಡ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆದಾರರು ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ತೆಗೆದಿರುವ ಉಪಖನಿಜದ ಪ್ರಮಾಣವನ್ನು ಅಂದಾಜಿಸಿ, ಗುತ್ತಿಗೆದಾರರಿಗೆ ಹೆಚ್ಚುವರಿಯಾಗಿ ತೆಗೆದಿರುವ ಖನಿಜದ ಪ್ರಮಾಣಕ್ಕೆ ದಂಡ ವಿಧಿಸಿ ಪಾವತಿಸುವಂತೆ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br>ಡ್ರೋಣ್ ಸರ್ವೆ ಮೂಲಕ ದಂಡ ವಿಧಿಸಿರುವುದನ್ನು ಪ್ರಶ್ನಿಸಿ, ಕೆಲವು ಕಲ್ಲುಗಣಿ ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿರುತ್ತಾರೆ.<br>ರಿಟ್ ಅರ್ಜಿ ಸಂಖ್ಯೆ 29870/2019 ಶ್ರೀ ಎಸ್.ಎನ್.ಶ್ರೀನಿವಾಸ ಶೆಟ್ಟಿ V/s ರಾಜ್ಯ ಸರ್ಕಾರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ 03.12.2019 ಮತ್ತು ರಿಟ್ ಅರ್ಜಿ ಸಂಖ್ಯೆ 13252/2019 ಎಸ್.ಆರ್.ಸ್ಟೋನ್ ಕ್ರಷರ್ V/s ರಾಜ್ಯ ಸರ್ಕಾರ ಪ್ರಕರಣದಲ್ಲಿ ಆದೇಶ ದಿನಾಂಕ 28.11.2019 ರಲ್ಲಿ, ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ತೆಗೆದಿರುವ ಉಪಖನಿಜದ ಪ್ರಮಾಣವನ್ನು ಡ್ರೋಣ್ ಉಪಕರಣದ ಸಹಾಯದಿಂದ ಸರ್ವೆ ಕಾರ್ಯ ನಡೆಸಿರುವ ಕ್ರಮವನ್ನು ಎತ್ತಿ ಹಿಡಿದಿರುತ್ತದೆ. |

--2

<table>
<tr>
<td></td>
<td></td>
<td>ಆದರೆ ಕಲ್ಲುಗಣಿ ಗುತ್ತಿಗೆದಾರರಿಂದ ದಂಡ ವಸೂಲು ಮಾಡುವ ಮುನ್ನ, ನೋಟೀಸ್ ಜಾರಿ ಮಾಡಿ ಅಹವಾಲು ಸಲ್ಲಿಸಲು ಸೂಕ್ತ ಅವಕಾಶ ನೀಡುವುದು ಮತ್ತು ದ್ರೋಣ್ ಸರ್ವೆ ವರದಿಯೊಂದಿಗೆ ನೋಟೀಸ್ ಜಾರಿ ಮಾಡಲು ತಿಳಿಸಿ, ಸದರಿ ಕಲ್ಲುಗಣಿ ಗುತ್ತಿಗೆದಾರರಿಗೆ ಇಲಾಖೆಯಿಂದ ದಂಡ ಪಾವತಿಸುವಂತೆ ಸೂಚಿಸಿ, ಇಲಾಖೆಯಿಂದ ನೀಡಲಾಗಿದ್ದ ನೋಟೀಸುಗಳನ್ನು ವಜಾಗೊಳಿಸಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಿಐ 70 ಎಂಜಿಎಸ್ 2020, ದಿನಾಂಕ 10.09.2020 ರಂತೆ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆದಾರರು ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ತೆಗೆದಿರುವ ಉಪಖನಿಜದ ಪ್ರಮಾಣವನ್ನು ಡ್ರೋಣ್ / ಡಿಜಿಪಿಎಸ್ ಸಮೀಕ್ಷೆಯಿಂದ ಸರ್ಕಾರದಿಂದಲೇ ಅಂದಾಜಿಸಿ, ಕ್ವಾರಿ ಪಿಟ್‌ನ Reduced Level ಗಳನ್ನು ನಿಗದಿಪಡಿಸುವ ಸಂಬಂಧ 2020-21ನೇ ಸಾಲಿನಲ್ಲಿ ಡ್ರೋಣ್/ಡಿಜಿಪಿಎಸ್ ಸರ್ವೆ ಕಾರ್ಯ ಕೈಗೊಳ್ಳಲು ರೂ.8.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.<br><br>ಅದರಂತೆ ಉಡುಪಿ ಜಿಲ್ಲೆಯಲ್ಲಿ ಡ್ರೋಣ್ / ಡಿಜಿಪಿಎಸ್ ಸರ್ವೆ ಕಾರ್ಯ ನಡೆಸುವ ಸೇವಾದಾರರನ್ನು ಇ-ಟೆಂಡರ್ ಮೂಲಕ ಆಯ್ಕೆ ಮಾಡಲು ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಡ್ರೋಣ್ ಸರ್ವೆ ಕಾರ್ಯ ಕೈಗೊಂಡು ವರದಿಯನ್ನು ಪಡೆದು ಪರಿಶೀಲಿಸಿ, ಪರವಾನಗಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಕಟ್ಟಡ ಕಲ್ಲು ಸಾಗಾಣಿಕೆ ಮಾಡಿರುವ ಬಗ್ಗೆ ದೃಢಪಟ್ಟಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.</td>
</tr>
<tr>
<td>ಇ)</td>
<td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳಿಗೆ ನೀಡಲಾದ ಕಟ್ಟಡ ಕಲ್ಲು, ಜೆಲ್ಲಿ ಮತ್ತು ಮರಳು ಇವುಗಳ ಪ್ರಮಾಣವೆಷ್ಟು; ಇವುಗಳಿಂದ ಇಲಾಖೆಗೆ ಬಂದ ರಾಜಧನವೆಷ್ಟು; ಇವುಗಳನ್ನು ತುಲನಾತ್ಮಕ ವಾಗಿ ಪರಿಶೀಲಿಸಲಾಗಿದೆಯೇ; ಇಲ್ಲವಾದಲ್ಲಿ, ಕೋಟ್ಯಾಂತರ ರೂಪಾಯಿ ರಾಜಧನ ಸೋರಿಕೆಗೆ ಕಾರಣರಾದ ಇಲಾಖಾಧಿಕಾರಿ ಗಳನ್ನು ಹೊಣೆ ಮಾಡಲಾಗಿದೆಯೇ? (ಪ್ರಕರಣವಾರು ವಿವರ ನೀಡುವುದು)</td>
<td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳಿಗೆ ಉಪಯೋಗಿಸಿದ ಕಟ್ಟಡ ಕಲ್ಲು, (ಜೆಲ್ಲಿ) ಮತ್ತು ಮರಳು ದಿಂದ ಸಂಗ್ರಹಿಸಿದ ರಾಜಧನ ಹಾಗೂ ಪ್ರಮಾಣದ ವಿವರ ಕೆಳಗಿನಂತಿದೆ; (ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ.</th><th>ವರ್ಷ</th><th>ವಿವಿಧ ಇಲಾಖೆಗಳ ಕಾಮಗಾರಿಗಳಿಂದ ರಾಜಧನ ಸಂಗ್ರಹಣೆ</th><th>ಪ್ರಮಾಣ (ಎಂ.ಎಂ.ಟಿ. ಗಳಲ್ಲಿ)</th></tr>
<tr><td>1</td><td>2018-19</td><td>99080.82</td><td>165.13</td></tr>
<tr><td>2</td><td>2019-20</td><td>105313.65</td><td>175.52</td></tr>
<tr><td>3</td><td>2020-21 (ಜನವರಿ 21)</td><td>50444.21</td><td>84.07</td></tr>
</table>
</td>
</tr>
</table>

| | | |
|---|---|---|
| | | ಸರ್ಕಾರದ ಸುತ್ತೋಲೆ ದಿನಾಂಕ 20.05.2004, 04.12.2007 ಮತ್ತು 23.01.2015 ರ ಮಾರ್ಗಸೂಚಿಯಂತೆ ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿ ಉಪಖನಿಜಗಳಾಗಿ ಕಟ್ಟಡ ಕಲ್ಲು, (ಜೆಲ್ಲಿ) ಮತ್ತು ಮರಳು ಉಪಯೋಗಿಸಲಾಗುತ್ತಿದೆ. ಅದರಂತೆ ಸರ್ಕಾರಕ್ಕೆ ವಿವಿಧ ಇಲಾಖೆಯಿಂದ ರಾಜಧನವನ್ನು ಸರ್ಕಾರದ ಬೊಕ್ಕಸಕ್ಕೆ ಜಮೆ ಆಗುತ್ತಿರುವುದರಿಂದ ರಾಜಧನ ಸೋರಿಕೆಯನ್ನು ತಡೆಗಟ್ಟಲು ಕ್ರಮವಹಿಸಲಾಗಿದೆ. |

ಸಂಖ್ಯೆ ಸಿಐ 182 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಅನುಬಂಧ -1

ಕಳೆದ 3 ವರ್ಷಗಳಲ್ಲಿ ಗಣಿ ಹಾಗೂ ಕಲ್ಲುಗಣಿಗಾರಿಕೆಯಿಂದ ಜಿಲ್ಲಾವಾರು ಸಂಗ್ರಹಿಸಿದ ರಾಜಧನ ವಿವರ

ರೂ.ಲಕ್ಷಗಳಲ್ಲಿ

| ಕ್ರಸಂ | ಜಿಲ್ಲೆ | 2018–19 | 2019–20 | 2020–21 (ಜನವರಿ 2021) |
|---|---|---|---|---|
| 1 | Bagalkot | 6386.45 | 6517.26 | 4242.13 |
| 2 | Bangalore Rural | 4260.52 | 3599.42 | 2855.31 |
| 3 | Bangalore Urban | 9822.25 | 15083.57 | 10652.47 |
| 4 | Belgaum | 8682.67 | 9737.85 | 6853.14 |
| 5 | Ballari | 2049.28 | 3846.35 | 2206.69 |
| 6 | Bidar | 1119.86 | 1612.27 | 790.90 |
| 7 | Vijayapura | 4428.79 | 3100.33 | 3312.86 |
| 8 | Chamarajanagar | 2259.87 | 2746.47 | 1349.46 |
| 9 | Chikmagalur | 2752.67 | 2459.42 | 2102.33 |
| 10 | Chikkaballapur | 4888.18 | 4584.17 | 3717.93 |
| 11 | Chitradurga | 2951.42 | 8100.58 | 6912.88 |
| 12 | Dakshina kannada | 2670.34 | 2635.12 | 2157.81 |
| 13 | Davanagere | 2885.42 | 2498.91 | 960.33 |
| 14 | Dharwad | 10163.46 | 11550.25 | 6118.05 |
| 15 | Gadag | 2646.36 | 3807.63 | 2195.39 |
| 16 | Hassan | 5733.95 | 8201.08 | 5483.73 |
| 17 | Haveri | 2069.82 | 3436.94 | 1709.82 |
| 18 | Head Office | 147962.97 | 188556.62 | 120365.56 |
| 19 | Hospete | 11213.95 | 13914.74 | 39291.47 |
| 20 | Gulbarga | 26123.38 | 24465.70 | 18318.90 |
| 21 | Kodagu | 580.31 | 800.60 | 536.39 |
| 22 | Kolar | 3312.29 | 2698.89 | 1353.06 |
| 23 | Koppal | 5197.41 | 4973.05 | 3554.47 |
| 24 | Mandya | 2146.77 | 2602.92 | 1939.01 |
| 25 | Mysuru | 5599.58 | 3624.69 | 1734.14 |
| 26 | Raichur | 5865.21 | 6586.54 | 5580.87 |
| 27 | Ramanagara | 4227.37 | 4171.44 | 3398.64 |
| 28 | Shivamogga | 2525.54 | 2064.64 | 1942.78 |
| 29 | Tumakuru | 5440.69 | 6088.54 | 4219.14 |
| 30 | Udupi | 1666.60 | 2423.49 | 1674.34 |
| 31 | Uttara Kannada | 2355.74 | 3594.71 | 1427.44 |
| 32 | Yadgir | 2653.88 | 2517.81 | 1301.56 |
| | Total | 302643.00 | 362902.00 | 270259.00 |

ಅನುಬಂಧ -2

ಕಳೆದ 3 ವರ್ಷಗಳಲ್ಲಿ ಕಲ್ಲುಗಣಿ ಗುತ್ತಿಗೆದಾರರಿಂದ ಸಂಗ್ರಹಿಸಿದ ದಂಡದ ಮೊತ್ತದ ವಿವರ

ರೂ.ಲಕ್ಷಗಳಲ್ಲಿ

| ಜಿಲ್ಲೆ | 2018-19 | 2019-20 | 2020-21 (ಜನವರಿ 21) | ಒಟ್ಟು ಮೊತ್ತ |
|---|---|---|---|---|
| Bangalore Rural | 47.60 | 29.89 | 0.00 | 77.49 |
| Belagavi | 81.39 | 176.10 | 46.05 | 303.53 |
| Chamaraja Nagara | 15.12 | 0.00 | 173.66 | 188.78 |
| chikkaballapura | 2.80 | 20.34 | 336.86 | 360.00 |
| Chikkamagaluru | 58.40 | 18.47 | 10.11 | 86.98 |
| Dakshina Kannada | 20.36 | 0.00 | 0.00 | 20.36 |
| Davanagere | 7.59 | 3.70 | 0.00 | 11.29 |
| Dharwad | 2.27 | 1.27 | 0.57 | 4.11 |
| Hospet | 30.12 | 83.26 | 82.75 | 196.13 |
| Kalaburagi | 31.84 | 61.23 | 0.00 | 93.06 |
| Kodagu | 20.12 | 27.64 | 0.00 | 47.76 |
| Koppal | 27.36 | 0.00 | 389.93 | 417.29 |
| Mandya | 2.29 | 7.23 | 260.77 | 270.30 |
| Mysuru | 25.57 | 3.60 | 0.00 | 29.17 |
| Raichur | 4.48 | 0.00 | 0.00 | 4.48 |
| Ramanagara | 123.69 | 35.08 | 0.00 | 158.78 |
| Shivamogga | 15.76 | 3.05 | 0.00 | 18.81 |
| Tumkur | 34.81 | 25.66 | 0.00 | 60.47 |
| Udupi | 0.69 | 0.22 | 82.59 | 83.50 |
| vijayapur | 0.00 | 0 | 41.40 | 41.40 |
| Yadgiri | 0.17 | 0.83 | 0.00 | 1.00 |
| Ballari | 0.00 | 0 | 0.00 | 0.00 |
| Kolar | 1107.91 | 229.36 | 0.00 | 1337.27 |
| U.K | 0.00 | 0.00 | 0.00 | 0.00 |
| Hassan | 8.97 | 85.82 | 20.57 | 115.36 |
| Bagalkote | 25.18 | 133.16 | 136.10 | 294.44 |
| Gadag | 17.89 | 0 | 30.93 | 48.82 |
| Bengaluru Urban | 1866.16 | 1419.34 | 0.00 | 3285.50 |
| Haveri | 0.00 | 0 | 0.12 | 0.12 |
| Chitradurga | 0.00 | 0.90 | 116.15 | 117.05 |
| Bidar | 0.00 | 0.00 | 5.76 | 5.76 |
| **Grand Total** | **3578.54** | **2366.14** | **1734.32** | **7679.00** |

CT-182-MMN-2021

ನಿರ್ದೇಶಕರು